# ಕರ್ನಾಟಕ ವಿಧಾನ ಪರಿಷತ್ತು

1) **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : **44 (278)**
2) ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 06.07.2023
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವು ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಸಂಗ್ರಹದಲ್ಲಿ ಮುಂಚೂಣಿಯಲ್ಲಿದ್ದು, ಪ್ರಮುಖ ತೆರಿಗೆ ಸಂಗ್ರಹ ಇಲಾಖೆಗಳಾದ ಅಬಕಾರಿ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳಲ್ಲಿ ತೆರಿಗೆ ಸಂಗ್ರಹವಾಗಿದ್ದರೂ ಸೋರಿಕೆ ಬಹಳಷ್ಟಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ, ಸೋರಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ಅಬಕಾರಿ ಇಲಾಖೆಯಲ್ಲಿ ಡಿಸ್ಟಿಲರಿ/ಬ್ರೀವರಿ/ ವೈನರಿಗಳಿಂದ ಮದ್ಯ/ಬಿಯರ್/ವೈನ್ ನ್ನು ರವಾನೆ ಮಾಡುವ ಪೂರ್ವದಲ್ಲಿಯೇ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಪಾವತಿಸಿಕೊಂಡು ಕರ್ನಾಟಕ ರಾಜ್ಯ ಪಾನೀಯ ನಿಗಮದ ಡಿಪೋಗಳಿಗೆ ಸರಕನ್ನು ಕಳುಹಿಸುತ್ತಿರುವುದರಿಂದ ಯಾವುದೇ ತೆರಿಗೆ ಸೋರಿಕೆಯಾಗುವುದಿಲ್ಲ.<br><br>ಅಬಕಾರಿ ರಾಜಸ್ವ ಸಂಗ್ರಹಕ್ಕೆ ಇ-ಪಾವತಿ (ಆನ್ ಲೈನ್) ವ್ಯವಸ್ಥೆ ಜಾರಿಯಲ್ಲಿರುತ್ತದೆ. ಅಬಕಾರಿ ಇಲಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಸಂಗ್ರಹವಾಗುತ್ತಿರುವ ಆದಾಯವು 1967-68 ರಲ್ಲಿ 7.11 ಕೋಟಿ ರೂಪಾಯಿಗಳಿಂದ 2022-23ರಲ್ಲಿ 29,920.37 ಕೋಟಿ ರೂಪಾಯಿಗಳಿಗೆ ಏರಿಕೆ ಆಗಿರುತ್ತದೆ.<br><br>ವಾಣಿಜ್ಯ ತೆರಿಗೆ ಇಲಾಖೆಯು ಸತತವಾಗಿ ರಸ್ತೆಗಳಲ್ಲಿ ಸರಕು ಸಾಗಣೆ ವಾಹನಗಳ ಮತ್ತು ಸಂಶಯಿತ ತೆರಿಗೆ ವಂಚನೆಯಲ್ಲಿ ತೊಡಗಿರಬಹುದಾದ ವರ್ತಕರ ತಪಾಸಣೆಯನ್ನು ಕೈಗೊಳ್ಳುತ್ತಿರುತ್ತದೆ. ರಾಜಸ್ವ ತೆರಿಗೆ ಸೋರಿಕೆಯನ್ನು ತಪ್ಪಿಸಲು ಜಾರಿ ಮತ್ತು ಜಾಗೃತಿ ವಿಭಾಗಗಳಿಂದ ಹೆಚ್ಚು ತಪಾಸಣೆಗಳನ್ನು ನಡೆಸಿ ರಾಜಸ್ವ ಸಂಗ್ರಹಣೆಯಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. 2022-23ನೇ ಸಾಲಿನಲ್ಲಿ ಜಾರಿ ಮತ್ತು ಜಾಗೃತಿ ವಿಭಾಗಗಳಿಂದ 11,733 ಪ್ರಕರಣಗಳನ್ನು ತನಿಖೆ ಮತ್ತು ತಪಾಸಣೆ ಕೈಗೊಂಡಿದ್ದು, ರೂ.1320 ಕೋಟಿ ಮೊತ್ತವನ್ನು ಸಂಗ್ರಹಿಸಲಾಗಿದೆ. ಈ ಪ್ರಕ್ರಿಯೆಯು ಮುಂದುವರೆದಿರುತ್ತದೆ. |

. . . . 2

| | | |
|---|---|---|
| ಆ) | ಕರ್ನಾಟಕ ರಾಜ್ಯವು ಆರ್ಥಿಕವಾಗಿ ಬಲವರ್ಧನೆಯಾಗಲು ಸರ್ಕಾರವು ಕೈಗೊಂಡಿರುವ ಪ್ರಮುಖ ಕಾರ್ಯಕ್ರಮಗಳೇನು? (ಮಾಹಿತಿ ಒದಗಿಸುವುದು). | ರಾಜ್ಯದ ಆರ್ಥಿಕ ಬಲವರ್ಧನೆಗಾಗಿ ಸರ್ಕಾರವು ಮೂಲವಾಗಿ ಸಂಪನ್ಮೂಲವನ್ನು ಸೃಜಿಸಲು ಕ್ರಮವಹಿಸುತ್ತಿದೆ. ತೆರಿಗೆ ಇಲಾಖೆಗಳು ಮಾಹಿತಿ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಹೆಚ್ಚು ಕಾರ್ಯಕ್ಷಮತೆಯಿಂದ ಕರ್ತವ್ಯ ನಿರ್ವಹಿಸುವುದರೊಂದಿಗೆ ತೆರಿಗೆ ಸೋರಿಕೆಯನ್ನು ತಡೆಗಟ್ಟಿ, ತೆರಿಗೆ ಸಂಗ್ರಹಣೆಯನ್ನು ಇನ್ನಷ್ಟು ಹೆಚ್ಚಿಸಲಾಗುವುದು ಹಾಗೂ ತೆರಿಗೆಯೇತರ ರಾಜಸ್ವವನ್ನು ಮತ್ತಷ್ಟು ಸೃಜಿಸಲು ಕ್ರಮಗೊಳ್ಳಲಾಗುವುದು.<br><br>ಇದರೊಂದಿಗೆ ಸರ್ಕಾರವು ವೆಚ್ಚ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ತಂತ್ರಜ್ಞಾನದ ಮೂಲಕ ಇತರೆ ಬದ್ಧ ವೆಚ್ಚಗಳನ್ನು ಕಡಿಮೆ ಮಾಡಲು ಶ್ರಮವಹಿಸಿದೆ.<br><br>ಸಂಪನ್ಮೂಲ ಸೃಜಿಸುವ ವೆಚ್ಚಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು ಮತ್ತು ಅನುತ್ಪಾದಕ ವೆಚ್ಚವನ್ನು ತಗ್ಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಆಇ 36 ಸಿಎಸ್‌ಎಲ್ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ